

# ಆಂಗ್ಲೊ ದೇಸಿ

## ಅಭಿರುಚಿಗಳ ಕಸಿ

**ಫ್ಯಾಷನ್ ಜಗತ್ತಿಗೆ ಲಗ್ಗೆ ಇಟ್ಟ ಹೊಸ ಆಂಗ್ಲೊ–ದೇಸಿ ಉಡುಗೆ ಯುವತಿಯರನ್ನು ಆಕರ್ಷಿಸಿದೆ. ಈ ವಿಭಿನ್ನ ಉಡುಪು ಹೊಸ ಟ್ರೆಂಡ್ ಸೃಷ್ಟಿಸಿದ್ದು ಕಾಲೇಜು ಹುಡುಗಿಯರು, ಕಚೇರಿಗೆ ತೆರಳುವ ಯುವತಿಯರು ಅಷ್ಟೇ ಏಕೆ ನಡುವಯಸ್ಸಿನ ಮಹಿಳೆಯರ ಮನಸ್ಸನ್ನೂ ಕದ್ದಿದೆ.**

**■ ಯು. ಅನಂತ್**

ಬಹುಶಃ ಫ್ಯಾಷನ್ ಜಗತ್ತು ಆಧುನಿಕತೆಗೆ ತೆರೆದುಕೊಳ್ಳುವಷ್ಟು ವೇಗವಾಗಿ ಬೇರೆ ಇನ್ಯಾವುದೇ ಕ್ಷೇತ್ರ ಬದಲಾವಣೆಗೆ ಆತುಕೊಳ್ಳಲು ಸಾಧ್ಯವಿಲ್ಲವೇನೋ. ಮಕ್ಕಳ ಉಡುಪು, ಯುವತಿಯರ ಉಡುಗೆ, ಮಹಿಳೆಯರ ಬಟ್ಟೆ, ಪುರುಷರ ಫ್ಯಾಷನಬಲ್ ಉಡುಗೆಗಳು, ಆ್ಯಕ್ಸೆಸರೀಸ್, ಒಡವೆಗಳು.. ಇವೆಲ್ಲವೂ ಫ್ಯಾಷನ್ ಟ್ರೆಂಡ್ ಸೃಷ್ಟಿಸುವಲ್ಲಿ ಪೈಪೋಟಿ ನಡೆಸುತ್ತಿವೆ. ಫ್ಯಾಷನ್ ಉಡುಗೆಯಂತೂ ಮಹಿಳೆಯರ ಮೆಚ್ಚು ಎಂಬುದು ನಿತ್ಯಸತ್ಯ ಎಂಬಂತಾಗಿದೆ.

ದೇಸೀ ಉಡುಗೆ, ಎಥ್ನಿಕ್, ಖಾದಿ, ಸಿಂಥೆಟಿಕ್, ರೇಷ್ಮೆ ಉಡುಗೆಗಳು.. ಸದಾ ಫ್ಯಾಷನ್ ತೆಕ್ಕೆಯೊಳಗೇ ತೇಲಾಡುತ್ತಿರುತ್ತವೆ. ನಮ್ಮ ಅಪ್ಪಟ ದೇಸೀ ಉಡುಗೆಯೊಂದಿಗೆ ಪಾಶ್ಚಾತ್ಯ ಉಡುಪುಗಳನ್ನು ಬ್ಲೆಂಡ್ ಮಾಡಿ ಇದೀಗ 'ಆಂಗ್ಲೊ–ದೇಸಿ' ಉಡುಗೆಗಳು ಬಂದಿದ್ದು ಫ್ಯಾಷನ್‌ಪ್ರಿಯರ ಮನತಣಿಸುತ್ತಿದೆ.

ಆಂಗ್ಲೊ–ದೇಸಿ ಉಡುಗೆಯಲ್ಲಿ ಮಹಿಳೆಯರ ಪೈಜಾಮದ ಮೇಲೆ ಹಾಕುವ ಶರ್ಟ್ ಅಥವಾ ಉದ್ದ ಕಡಿಮೆ ಇರುವ ಕುರ್ತಿ, ಫ್ರಾಕ್ ಮಾದರಿಯ ಉಡುಗೆಗಳು ಹೆಚ್ಚು ಜನಪ್ರಿಯ. ಹಾಗೆಂದು ನಮ್ಮ ಸಲ್ವಾರ್ ರೂಪದ್ದೇ ಉಡುಗೆಗಳೂ ಇದೇ ಸಾಲಿಗೆ ಸೇರುತ್ತವೆ. ಪಾಶ್ಚಾತ್ಯ ಸಂಸ್ಕೃತಿಯ ಗಾಳಿ ಸೋಕಿದಂತಿರುವ ಇಂಥ ಉಡುಪುಗಳು 'ಮಿಕ್ಸ್ ಅಂಡ್ ಮ್ಯಾಚ್' ಪರಿಕಲ್ಪನೆಯಲ್ಲಿ ಹೊಸ ಅವತಾರ ತಾಳಿ ಫ್ಯಾಷನ್ ಜಗತ್ತಿನಲ್ಲಿ ಮಿಂಚುತ್ತಿವೆ. ಕಾಲೇಜು ಕನ್ಯೆಯರು, ಮನೆಯಿಂದಲೇ ಕೆಲಸ ಮಾಡುತ್ತಿದ್ದ ಮಹಿಳೆಯರು, ಇದೀಗ ಕಚೇರಿಗೆ ತೆರಳಲಾರಂಭಿಸಿದ ಯುವತಿಯರು ಹೊಸ ಫ್ಯಾಷನ್ ಉಡುಗೆಯತ್ತ ಚಿತ್ತ ಹರಿಸಿದ್ದಾರೆ.

ಹಿಂದೆಲ್ಲ ಚೂಡಿದಾರ್, ಪಲಾಜೊ, ಸಿಂಪಲ್ ಸಲ್ವಾರ್‌ಗಳಲ್ಲೇ ಹಲವು ವೈವಿಧ್ಯಗಳಿದ್ದವು. ಅದು ಬಣ್ಣ, ವಿನ್ಯಾಸ, ಆಕಾರಕ್ಕೇ